• ಬೆಂಗಳುರು ನಗರದ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ಕಲುಷಿತ ನೀರು ಶುದ್ಧೀಕರಿಸಲು ಮಂಡಳಿಯು ಎಂಟು ಸಾಮೂಹಿಕ ಸಂಸ್ಕರಣಾ ಘಟಕಗಳಿಗೆ ಅನುಮತಿ ನೀಡಿದ್ದು, ಇವುಗಳು ಕಾರ್ಯಾಚರಣೆಯಲ್ಲಿವೆ. ಬೃಹತ್ ಕೈಗಾರಿಕೆಗಳು ಕಲುಷಿತ ನೀರನ್ನು ಶುದ್ಧಿಕರಿಸಲು ತಮ್ಮದೇ ಆದ ಶುದ್ಧಿಕರಣ ಘಟಕಗಳನ್ನು ಸ್ಥಾಪಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಹೋಬಳಿ ಮಟ್ಟದಲ್ಲಿ ಪಿಂಚಣಿ ಅದಾಲತ್

1065 (1906); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಹೋಬಳಿ ಮಟ್ಟದಲ್ಲಿ ಪಿಂಚಣಿ ಅದಾಲತ್ ನಡೆಸುವ ಕಾರ್ಯ ಆರಂಭವಾಗಿದೆಯೇ;

ಆ) ಈ ಪಿಂಚಣಿ ಅದಾಲತ್ ನಲ್ಲಿ ಯಾವ ಯಾವ ಸಮಸ್ಯೆಗೆ ಪರಿಹಾರ ನೀಡಲು ಸರ್ಕಾರ ನಿರ್ಧರಿಸಿದೆ (ವಿವರ ನೀಡುವುದು) ;

ಇ) ಅದಾಲತ್ ಮೂಲಕ ಸಾರ್ವಜನಿಕರನ್ನು ತಲುಪುವ ಕಾರ್ಯಕ್ಕೆ ಯಾವ ರೀತಿ ರೂಪುರೇಷೆ ರೂಪಿಸಲಾಗಿದೆ; ಇಲ್ಲಿ ಬರುವ ದೂರುಗಳನ್ನು ಹೇಗೆ ನಿರ್ವಹಿಸಲಾಗುತ್ತಿದೆ (ವಿವರ ನೀಡುವುದು) ;

ಈ) ಜನಶ್ರೀ ಭೀಮಾ ಯೋಜನೆಯನ್ನು ಆಮ್ ಆದ್ಮಿ ಭೀಮಾ ಯೋಜನೆ ಅಡಿ ವಿಲೀನಗೊಳಿಸಲು ಸರ್ಕಾರ ತೀರ್ಮಾನಿಸಲಾಗಿದೆಯೇ; ಇದರಿಂದ ಆಗುವ ಅನುಕೂಲವೇನು (ವಿವರ ನೀಡುವುದು)`;

ಉ) ಇದಕ್ಕಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ; ಹೆಚ್ಚು ಜನರನ್ನು ಈ ಯೋಜನೆ ತಲುಪಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಊ) ಮಾಜೀ ಪಟೇಲರುಗಳಿಗೆ ಹಾಲೀ ನೀಡುತ್ತಿರುವ ಪಿಂಚಣಿ ಮೊತ್ತವೆಷ್ಟು? ಈಗ ಇದನ್ನು ಹೆಚ್ಚಿಸಲಾಗಿದೆಯೇ ಎಷ್ಟು ಮೊತ್ತವನ್ನು ಏರಿಸಲಾಗಿದೆ (ವಿವರ ನೀಡುವುದು) ;

ಶ್ರೀ ವಿ. ಶ್ರೀನಿವಾಸಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೋಬಳಿ ಮಟ್ಟದಲ್ಲಿ ಪಿಂಚಣಿ ಅದಾಲತ್ ನಡೆಸುವ ಕಾರ್ಯವನ್ನು 2013ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

ಆ) ಸಾಮಾಜಿಕ ಭದ್ರತಾ ಯೋಜನೆಗಳಾದ ಅಂಧವಿಕಲ ವೇತನ, ವೃದ್ಧಾಪ್ಯ ವೇತನ, ವಿಧವಾ ವೇತನ, ಮನಸ್ವಿನಿ, ಮೈತ್ರಿ ಮತ್ತು ಸಂಧ್ಯಾ ಸುರಕ್ಷಾ ಯೋಜನೆಗಳಿಗೆ ಸಂಬಂಧಿಸಿದಂತೆ

1. ಮಂಜೂರಾತಿ ಆದೇಶ ಪಡೆದದ್ದು, ಪಿಂಚಣಿ ವಿತರಣೆಯಾಗದಿರುವ ಕುರಿತು.

2. ಜನಸ್ನೇಹಿ ಕೇಂದ್ರಗಳಲ್ಲಿ ಸ್ವೀಕರಿಸಿರುವ ಅರ್ಜಿಗಳ ಕ್ಲುಪ್ತ ಕಾಲದಲ್ಲಿ ವಿಲೇವಾರಿಯ ಕುರಿತು.

3. ಹಾಲೀ ಫಲಾನುಭವಿಗಳ ಪಿಂಚಣಿ ಹಣ ವಿತರಣೆ ಕುರಿತು.

4. ಪಿಂಚಣಿಗೆ ಸಂಬಂಧಿಸಿದ ಇನ್ನಿತರೇ ದೂರುಗಳ ಕುರಿತು. ಕುಂದು ಕೊರತೆಗಳನ್ನು ಆಲಿಸಿ, ಸಮಸ್ಯೆಗಳ ಬಗ್ಗೆ ಪಿಂಚಣಿ ಅದಾಲತ್ ಮೂಲಕ ಕ್ರಮವಹಿಸಲಾಗುತ್ತಿದೆ.

ಇ) ಉಪವಿಭಾಗಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಹೋಬಳಿಗಳಲ್ಲಿರುವ ಜನಸ್ನೇಹಿ ಕೇಂದ್ರಗಳಲ್ಲಿ ಪಿಂಚಣಿ ಅದಾಲತ್‌ನ್ನು ಪ್ರತಿ ತಿಂಗಳು ಒಂದನೇ ತಾರೀಖಿನಿಂದ 15 ತಾರೀಖಿನೊಳಗೆ ನಡೆಸಲಾಗುತ್ತಿದೆ. ಪಿಂಚಣಿ ಅದಾಲತ್‌ಗಳಲ್ಲಿ ಸ್ವೀಕೃತವಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುತ್ತಿದೆ.

ಈ) ಸರ್ಕಾರದ ಆದೇಶ ಸಂಖ್ಯೆ ಆರ್‌ಡಿಪಿ 52/ಡಿಎಪಿಬಿ/2012 ದಿನಾಂಕ: 18/07/2013ರಲ್ಲಿ ಜನಶ್ರೀ ಭೀಮಾ ಯೋಜನೆಯನ್ನು ಆಮ್ ಆದ್ಮಿ ಭೀಮಾ ಯೋಜನೆಯಡಿ ವಿಲೀನಗೊಳಿಸಲಾಗಿದೆ. ಜನಶ್ರೀ ಭೀಮಾ ಯೋಜನೆ ಹಾಗೂ ಆಮ್ ಆದ್ಮಿ ಯೋಜನೆಯಡಿ ಈ ಎರಡೂ ಯೋಜನೆಗಳ ಸ್ವರೂಪ ಹಾಗೂ ಗುಣಲಕ್ಷಣಗಳು ಒಂದೇ ರೀತಿಯಾಗಿ

ದ್ದರಿಂದ ಕಾರಣ ಹಾಗೂ ಎರಡೂ ಯೋಜನೆಗಳು ಕೇಂದ್ರ ಸರ್ಕಾರದ ಪ್ರಾಯೋಗಿಕ ಯೋಜನೆಗಳಾಗಿದ್ದರಿಂದ ಈ ಯೋಜನೆಗಳನ್ನು ವಿಲೀನಗೊಳಿಸಲಾಗಿದೆ. ಇದರಿಂದಾಗಿ ಗ್ರಾಮೀಣ ಭೂರಹಿತ ಕುಟುಂಬ ಗಳ ಜೊತೆಗೆ ಗುರುತಿಸಲಾದ 72 ವಿವಿಧ ಕಸುಬುದಾರರ ಕುಟುಂಬ ಳಿಗೂ ಸೌಲಭ್ಯ ಕಲ್ಪಿಸಿದಂತಾಗಿದೆ.

ಊ) 2014–15ನೇ ಸಾಲಿನಲ್ಲಿ ಆಮ್ ಆದ್ಮಿ ಭೀಮಾ ಯೋಜನೆಯ ಅನುಷ್ಠಾನಕ್ಕಾಗಿ ` 20 ಕೋಟಿಗಳ ಅನುದಾನವನ್ನು ಮೀಸಲಿಡಲಾ ಗಿದೆ. ಯೋಜನೆಯಡಿ ಇರುವ 72 ಕಸುಬುದಾರರನ್ನು ವಿವಿಧ ಸಂಘ ಸಂಸ್ಥೆಗಳ ಮೂಲಕ ಗುರುತಿಸಲಾಗುತ್ತಿದೆ.

ಋ) ಮಾಜಿ ಪಟೇಲರುಗಳಿಗೆ ಹಾಲಿ ಮಾಸಿಕ `2000/– ಗಳ ಅನುಕಂಪ ಭತ್ಯೆಯನ್ನು ನೀಡಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ ಕಂ.ಇ 156 ಎಂ.ವಿಎಸ್ 2012 ದಿನಾಂಕ : 24.05.2014ರನ್ವಯ ಮಾಹೆಯಾನ ` 1450/– ಗಳಿಂದ 2000/– ಗಳಿಗೆ ಅನುಕಂಪ ಭತ್ಯೆಯನ್ನು ಹೆಚ್ಚಿಸಿ ದಿನಾಂಕ 01.04.2014 ರಿಂದ ಜಾರಿಗೆ ಬರುವಂತೆ ಮಂಜೂರಾತಿ ನೀಡಲಾಗಿದೆ. ಅಂದರೆ ಮಾಹೆ ಯಾನ 550/– ರೂ. ಗಳನ್ನು ಹೆಚ್ಚಿಸಲಾಗಿದೆ.

ಸೂರ್ಯಜ್ಯೋತಿ ರೈತರ ಬಾಳಿನ ಪರಂಜ್ಯೋತಿ

1066 (1907); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಸೂರ್ಯಜ್ಯೋತಿ ರೈತರ ಬಾಳಿನ ಪರಂಜ್ಯೋತಿ ಎಂಬ ಕಾರ್ಯ ಕ್ರಮದ ವಿವರ ನೀಡುವುದು?

ಆ) ಈ ಯೋಜನೆಯ ಲಾಭ ಯಾರಿಗೆ ಸಿಗಲಿದೆ; ಇದಕ್ಕಿರುವ ನೀತಿ ನಿಯಮಗಳೇನು (ವಿವರ ನೀಡುವುದು);

ಇ) ಈ ಕಾರ್ಯಕ್ರಮ ರಾಜ್ಯದ ಯಾವ ಯಾವ ಜಿಲ್ಲೆಗಳಿಗೆ ಅನುಷ್ಠಾನಕ್ಕೆ ತರಲಾಗಿದೆ; ಇದರ ಲಾಭ ಹೇಗೆ ಸಿಗಲಿದೆ (ವಿವರ ನೀಡುವುದು);